# ಮನವಿ ಪತ್ರ

ರಿಗೆ,

ಗೌರವಾನ್ವಿತ ರಾಜ್ಯಪಾಲರು,

ಕರ್ನಾಟಕ ಸರಕಾರ ಅವರ ಸನ್ನಿಧಾನಕ್ಕೆ

**ನ**ಮ್ಮ ಸಮಾಜವು ಇಂದು ಅನೇಕ ಕೆಡುಕುಗಳಿಂದ ತೊಳಲಾಡುತ್ತಿದೆ. ಭ್ರಷ್ಟಾಚಾರದ ಪ್ರಮಾಣವು ಪರಾಕಾಷ್ಠೆಗೆ ತಲುಪಿದ್ದು, ಎಲ್ಲಾ ಕ್ಷೇತ್ರಗಳಲ್ಲೂ ಅದು ವ್ಯಾಪಿಸಿದೆ. ಹಗರಣಗಳು ತೀರಾ ಸಾಮಾನ್ಯಗೊಂಡಿದ್ದು, ಅದರಲ್ಲಿ ಒಳಗೊಂಡಿರುವ ಅಪಾರ ಪ್ರಮಾಣದ ಹಣವನ್ನು ಊಹಿಸಲು ಜನಸಾಮಾನ್ಯರಿಗಂತೂ ಸಾಧ್ಯವಾಗುತ್ತಿಲ್ಲ. ಇತ್ತೀಚಿನ ಸಮೀಕ್ಷೆಯಂತೆ ಅತ್ಯಂತ ಭ್ರಷ್ಟ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 4ನೇ ಸ್ಥಾನದಲ್ಲಿದೆ. ಇಂದಿನ ಈ ಅವ್ಯವಸ್ಥೆಗೆ ಮೂಲ ಕಾರಣ ಮನುಷ್ಯನ ದುರಾಸೆ. ಇದು ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಪರಿಣಾಮ ಬೀರಿದ್ದು, ರಾಜಕಾರಣಿಗಳು, ಅಧಿಕಾರಿಗಳು, ಬಂಡವಾಳಶಾಹಿಗಳು ಈ ವ್ಯವಸ್ಥೆಯ ರೂವಾರಿಗಳು.

ನಮ್ಮ ಆರ್ಥಿಕ ವ್ಯವಸ್ಥೆಯು ಏರುಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದರೂ, ಬಡವರ ಮತ್ತು ನಿರಾಶ್ರಿತರ ಸಂಖ್ಯೆ ಹಾಗೂ ಬವಣೆ ಹೆಚ್ಚುತ್ತಿದೆ. ಹಿಂಸೆ, ಅನ್ಯಾಯ, ಅಕ್ರಮ ಮತ್ತು ಸಾಮಾಜಿಕ ತಾರತಮ್ಯಗಳು ಹೆಚ್ಚುತ್ತಲಿದೆ. ಮೋಸ, ಅಪ್ರಾಮಾಣಿಕತೆ, ಕಳ್ಳಸಂತೆ, ಕಲಬೆರಕೆ, ಕಳ್ಳಸಾಗಾಣಿಕೆ ಇತ್ಯಾದಿ ಸಮಾಜಬಾಹಿರ ಚಟುವಟಿಕೆಗಳು ಶೀಘ್ರ ಹಣ ಸಂಪಾದನೆಯ ದಾರಿಗಳಾಗಿವೆ. ಸಾರ್ವಜನಿಕ ಜೀವನದಲ್ಲಿ ಸ್ವಜನ ಪಕ್ಷಪಾತ, ಶೋಷಣೆ, ಹಣ ಸುಲಿಗೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯ ಕೊರತೆ ಸಾರ್ವಜನಿಕ ರಂಗದಲ್ಲಿ ಸರ್ವವ್ಯಾಪಿಯಾಗಿದ್ದು ತೀರಾ ಸಾಮಾನ್ಯವೆಂದೆನಿಸಿಬಿಟ್ಟಿದೆ. ರಾಜಕೀಯದ ಅಪರಾಧೀಕರಣ, ಶಿಕ್ಷಣದ ವ್ಯಾಪಾರೀಕರಣ ಮತ್ತು ಆರ್ಥಿಕತೆಯ ಉದ್ಯಮೀಕರಣ ಹೆಚ್ಚುತ್ತಿವೆ.

ಇಂದು ಭ್ರಷ್ಟಾಚಾರದ ವಿರುದ್ಧ ಸಾರ್ವಜನಿಕ ಅಸಹನೆ ತೀವ್ರಗೊಳ್ಳುತ್ತಿದ್ದು, 'ಭ್ರಷ್ಟಾಚಾರದ ವಿರುದ್ಧ ಭಾರತ'(India Against Corruption)ದಂತಹ ಚಳುವಳಿಗಳು ಇದಕ್ಕೆ ತಾಜಾ ಉದಾಹರಣೆ. ಇಂದಿನ ಈ ಸಂದಿಗ್ಧ ಸಮಯದಲ್ಲಿ, ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡು, ಸಮಾಜದ ಸುಧಾರಣೆಯಲ್ಲಿ ವಿಶೇಷತಃ ದೇಶದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದರಲ್ಲಿ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ.

ಈ ನಿಟ್ಟಿನಲ್ಲಿ ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡುವ ದೀರ್ಘಕಾಲೀನ ಪರಂಪರೆಯುಳ್ಳ ಜಮಾಅತೆ ಇಸ್ಲಾಮೀ ಹಿಂದ್, ಕರ್ನಾಟಕವು **ಡಿಸೆಂಬರ್ 2011ರ 9ರಿಂದ 18ರ** ವರೆಗೆ ಭ್ರಷ್ಟಾಚಾರ ಮತ್ತು ಇನ್ನಿತರ ಸಾಮಾಜಿಕ ಕೆಡುಕುಗಳ ವಿರುದ್ಧ **'ಕೆಡುಕು ಮುಕ್ತ ಸಮಾಜದೆಡೆಗೆ'** ಎಂಬ ರಾಜ್ಯವ್ಯಾಪಿ ಅಭಿಯಾನವನ್ನು ಆಯೋಜಿಸಿದೆ. ಇದರ ಪ್ರಯುಕ್ತ ಸಾರ್ವಜನಿಕ ಸಭೆಗಳು, ರ್‍ಯಾಲಿ, ವಿಚಾರಗೋಷ್ಠಿ ಮತ್ತು ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗಿದೆ. ಫೋಲ್ಡರ್ ಮತ್ತು ಕಿರು ಹೊತ್ತಿಗೆಗಳನ್ನು ಧಾರಾಳ ಪ್ರಮಾಣದಲ್ಲಿ ವಿತರಿಸಲಾಗುವುದು.

ಈ ಹಿನ್ನೆಲೆಯಲ್ಲಿ ಜಮಾಅತ್ ಈ ಕೆಳಗಿನ ವಿಷಯಗಳ ಬಗ್ಗೆ ಸರಕಾರ ಮತ್ತು ಸಂಬಂಧಿತ ನಾಗರಿಕರ ಗಮನ ಸೆಳೆಯ ಬಯಸುತ್ತದೆ.

(i) ಭ್ರಷ್ಟಾಚಾರವು ದುರಾಸೆ, ಸ್ವಾರ್ಥ, ಅಪ್ರಾಮಾಣಿಕತೆ, ಅನ್ಯಾಯ ಮತ್ತು ಭೌತಿಕತೆಯ ಒಟ್ಟು ಫಲವಾಗಿದ್ದು, ಅದರ ಸಮಗ್ರ ಪರಿಹಾರಕ್ಕಾಗಿ ಪ್ರಯತ್ನಿಸಬೇಕಾಗಿದೆ.

(ii) ಸಮಾಜದ ಪ್ರತಿಯೊಬ್ಬ ನಾಗರಿಕನಲ್ಲಿ ನೈತಿಕ ಪ್ರಜ್ಞೆಯನ್ನು ಮೂಡಿಸುವುದು ಮತ್ತು ಭ್ರಷ್ಟಾಚಾರವು ಪಾಪ ಮತ್ತು ಅಪರಾಧ ಎಂಬ ವಾತಾವರಣವನ್ನು ನಿರ್ಮಿಸುವುದು ಈ ಸಮಸ್ಯೆ ಪರಿಹಾರದ ಮೂಲವಾಗಿದೆ. ಧರ್ಮ ಮತ್ತು ಆಧ್ಯಾತ್ಮಿಕತೆಯು ಗೌರವಿಸಲ್ಪಡುವ ಮತ್ತು ಪವಿತ್ರ ಎಂದು ಭಾವಿಸುವ ನಮ್ಮ ದೇಶದಲ್ಲಿ ದೈವಿಕ ಪ್ರಜ್ಞೆ, ದೇವಭಯ ಮತ್ತು ತನ್ನ ಕರ್ಮಗಳ ಉತ್ತರದಾಯಿತ್ವ ಪ್ರಜ್ಞೆಯನ್ನು ಜನರಲ್ಲಿ ಮೂಡಿಸುವುದು ಮತ್ತು ಬೆಳೆಸುವುದು.

(iii) ನಿಷ್ಪಕ್ಷ, ನ್ಯಾಯಯುತ, ಶೀಘ್ರ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಲು ಸರಕಾರವು ಲೋಕಾಯುಕ್ತ,

Anti Corruption Bureau, CBI, CVC, Enforcement Agency ಇತ್ಯಾದಿ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಮತ್ತು ಸ್ವಾತಂತ್ರ್ಯ ನೀಡುವುದು.

(iv) ಚರ್ಚೆಯಲ್ಲಿರುವ ಲೋಕಪಾಲ ಮಸೂದೆಯನ್ನು ಪೂರ್ಣ ಪ್ರಮಾಣದ ಚರ್ಚೆಯ ಬಳಿಕ ಸಂವಿಧಾನದ ಚೌಕಟ್ಟಿನಲ್ಲಿ ಸಂಸತ್ತಿನಲ್ಲಿ ಮಂಜೂರು ಮಾಡಬೇಕು. ಆದರೂ ಕೇವಲ ಶಾಸಕಾಂಗ ಮಾತ್ರ ಈ ಪೆಡಂಭೂತವನ್ನು ನೀಗಿಸಲು ಶಕ್ತವಲ್ಲ.

(v) ಪ್ರತಿಯೊಬ್ಬನೂ ತನ್ನ ವೈಯಕ್ತಿಕ ಜೀವನದಲ್ಲಿ ಪರಿಶುದ್ಧತೆಯನ್ನು ಪಾಲಿಸಬೇಕು. ನಾವು ಯಾವ ರೂಪದಲ್ಲೂ ಲಂಚವನ್ನು ಕೊಡಲಾರೆವು, ಪಡೆಯಲಾರೆವು ಎಂಬ ದೃಢ ನಿರ್ಧಾರವನ್ನು ಕೈಗೊಳ್ಳಬೇಕು.

(vi) ನಿರಂತರ ಬೆಳೆಯುತ್ತಿರುವ ಆರ್ಥಿಕ ಉದ್ಯಮೀಕರಣವು ಪುರಾತನ, ಸಾಮಾಜಿಕ, ವರ್ಗೀಯ, ಆರ್ಥಿಕ ಅಸಮಾನತೆ ಮತ್ತು ತಾರತಮ್ಯವನ್ನು ಇನ್ನಷ್ಟು ಕೆಡಿಸುತ್ತಿದೆ (ಇತ್ತೀಚೆಗಿನ ಉದ್ದೇಶಿತ ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಹೂಡಿಕೆ(FDI)ಯು ಇದಕ್ಕೆ ಒಂದು ಉದಾಹರಣೆಯಾಗಿದೆ). ಇವು ಭ್ರಷ್ಟಾಚಾರವನ್ನು ಉತ್ತೇಜಿಸುವ ಪ್ರಮುಖ ಕಾರಣಗಳಾಗಿದ್ದು, ಇವುಗಳನ್ನು ವಿರೋಧಿಸಬೇಕಾಗಿದೆ. ಸರ್ವರಿಗೂ ನ್ಯಾಯವನ್ನು ಕಲ್ಪಿಸುವ ಸಂತುಲಿತ ಅಭಿವೃದ್ಧಿಯು ಶಾಂತಿಯುತ ಮತ್ತು ನ್ಯಾಯಪೂರ್ಣ ಸಮಾಜಕ್ಕೆ ಅಗತ್ಯವಾಗಿದೆ.

(vii) ನಿಷ್ಪಕ್ಷ ಮತ್ತು ಪ್ರಜ್ಞಾವಂತ ನಾಗರಿಕರು ಸಂಘಟಿತರಾಗುವ ಮತ್ತು ಈ ಕಾರಣಕ್ಕೆ ಕ್ರಿಯಾಶೀಲರಾಗುವ ಅಗತ್ಯವಿದೆ. ಸಮಾಜವನ್ನು ಕೆಡುಕುಗಳು ನುಂಗಿ ಬಿಡುವಷ್ಟರ ಮಟ್ಟಿಗೆ ಅವರು ಮೌನವಾಗಿರಬಾರದು.

ಪ್ರಸ್ತುತ ವಿಷಯಗಳ ಬಗ್ಗೆ ತೀವ್ರ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮಲ್ಲಿ ವಿನಯಪೂರ್ವಕವಾಗಿ ವಿನಂತಿಸುತ್ತೇವೆ.